1931

ಶಿವಾನುಭವ ಗ್ರಂಥಮಾಲಾ ನಂ॥ ೮. 6795-

# ಪ್ರಭುದೇವರ ವಚನಗಳು.

033:16A11
Hal
6795-

ಸಂಪಾದಕರು
ರಾ॥ ಸಾ॥ ಫ. ಗು. ಹಳಕಟ್ಟಿ
ಬಿ. ಎ. ಎಲ್. ಎಲ್. ಬಿ. ವಕೀಲ

The. Vijay College
Library
Vijayanagar
B...

ವಿಜಾಪುರ

೧೯೩೧

ಬೆಲೆ ೨। ರೂಪಾಯಿ.

Acc
126

126

6795

ಇದನ್ನು ವಿಜಾಪುರದಲ್ಲಿ
ರಾ। ಸಾ। ಫ. ಗು. ಹಳಕಟ್ಟಿ ಇವರು ತಮ್ಮ
«ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ» ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿ ಬುರುಜದ ಹತ್ತರ ತಮ್ಮ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

VIJAY COLLEGE LIBRARY,
BIJAPUR.



ಹುಬ್ಬಳ್ಳಿಯ ಮೂರುಸಾವಿರಮಠದ
ಶ್ರೀಮಜ್ಜಗದ್ಗುರು
ಗಂಗಾಧರ ಮಹಾಸ್ವಾಮಿಗಳವರು.

॥ ಓಂ ॥

ವೀರಶೈವ ಧರ್ಮ ಜಾಗ್ರತಿಗೋಸ್ಕರ
ಮತ್ತು ಅದರ
ವಾಙ್ಮಯ ಅಭಿವೃದ್ಧಿಗೋಸ್ಕರ
ಸದಾ
ಪ್ರಯತ್ನಿಸುತ್ತಿರುವ ಮತ್ತು ಪ್ರೋತ್ಸಾಹಿಸುತ್ತಿರುವ
ಶ್ರೀಮಜ್ಜಗದ್ಗುರು ಹುಬ್ಬಳ್ಳಿ
ಮೂರುಸಾವಿರ ಮಹಾ ಮಠಾಧಿಷ್ಠಿತ
ಶ್ರೀಗುರುಸಿದ್ಧಯೋಗಿರಾಜ ದೇಶಿಕೇಂದ್ರ
ಮಹಾಸ್ವಾಮಿಗಳವರಿಗೆ
ಈ ಗ್ರಂಥವು
ಅತ್ಯಂತ ಭಕ್ತಿ ವಿಶ್ವಾಸಗಳಿಂದ ಅರ್ಪಿಸಲ್ಪಟ್ಟಿದೆ.

ಸಂಪಾದಕ.

# ಪ್ರಸ್ತಾವನೆ.

ಪ್ರಭುದೇವರ ವಚನಗ್ರಂಥವು ಮಹತ್ವದ ಆಧ್ಯಾತ್ಮಿಕ ವಿಷಯ ನಿರೂಪಣೆಯ ವಿಷಯದಲ್ಲಿ ವಚನವಾಙ್ಮಯದಲ್ಲಿ ಬಹು ಉನ್ನತಸ್ಥಾನವನ್ನು ಹೊಂದಿದೆ. ಈ ಪ್ರಭುದೇವರ ವಚನಗಳಾದರೂ ಪುರಾತನ ವಚನಗಳಂತೆ ಒತ್ತಟ್ಟಿಗೆ ಎಲ್ಲಿಯೂ ಸಿಕ್ಕುವದಿಲ್ಲ. ಅವುಗಳು ಬೇರೆ ಬೇರೆ ವಚನ ಸಂಗ್ರಹಗಳಲ್ಲಿ ಖಂಡಶಃ ದೊರೆಯುತ್ತವೆ. ಆದರೆ ಇವುಗಳು ಬಹು ವಿಪುಲವಾಗಿದ್ದು ಅವುಗಳನ್ನು ಏಕತ್ರಮಾಡುವ ಕಾರ್ಯವು ಸಂಪೂರ್ಣವಾಗಿ ಯಾವಾಗ್ಗೆಯೂ ಕೈಕೊಂಡಂತೆ ತೋರಿಬರುವದಿಲ್ಲ. ಆದರೆ "ಪ್ರಭುದೇವರ ವಚನಗಳು" ಎಂಬ ಪ್ರಸ್ತುತ ವಚನಗ್ರಂಥವೂ, "ಪ್ರಭುದೇವರ ಸೃಷ್ಟಿಯ ವಚನ" ವೆಂದೂ ಹೀಗೆ ಅವನ ಹಲಕೆಲವು ಗ್ರಂಥಗಳು ಪ್ರಚುರವಾಗಿರುತ್ತವೆ. ಇವುಗಳಲ್ಲಿ ಈಗಿನ ವಚನಗ್ರಂಥವೇ ಬಹು ಮಹತ್ವದ್ದಿದ್ದು ವಚನವಾಙ್ಮಯದಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿದೆ.

ಈ ಗ್ರಂಥವನ್ನು ನಾವು ಕೆಳಗೆ ಕಾಣಿಸಿದ ಪ್ರತಿಗಳ ಸಹಾಯದಿಂದ ಸಿದ್ಧಗೊಳಿಸಿರುತ್ತೇವೆ. ಅವುಗಳು ಯಾವವೆಂದರೆ:-

(ಅ) ಕೈ. ನಾ. ಮಂಚಾಲಿ ಶಿವಲಿಂಗಪ್ಪನವರ ಸಂಗ್ರಹದಲ್ಲಿದ್ದ ಪ್ರತಿ. ಇದು ಹಾವೇರಿಯಲ್ಲಿಯದು.

(ಬ, ಕ) ಶಿ॥ ಮೂ॥ ಮುರಿಗೆಯ್ಯ ಜಂಗಿನ ಬಾಗಲಕೋಟಿ ಇವರ ಸಂಗ್ರಹದಲ್ಲಿದ್ದ ಎರಡು ಪ್ರತಿಗಳು.

(ಡ) ಶ್ರೀ. ಚನಮಲ್ಲಪ್ಪ ಹಲಸಂಗಿ ಇವರಲ್ಲಿದ್ದದ್ದು.

ಮೊದಲನೆಯ ೩ ಪ್ರತಿಗಳು ಬಹುಮಟ್ಟಿಗೆ ಶುದ್ಧವಾಗಿವೆ. ಆದರೆ ೪ನೇ ಪ್ರತಿಯು ಬಹಳ ಅಶುದ್ಧವು.

ನಮಗೆ ಈ ಪ್ರತಿಗಳನ್ನು ಕಳಿಸಿಕೊಟ್ಟದ್ದಕ್ಕೆ ನಾವು ಈ ಎಲ್ಲ ಮಹನೀಯರುಗಳಿಗೆ ಬಹು ಕೃತಜ್ಞರಾಗಿದ್ದೇವೆ.

ಈ ಗ್ರಂಥವನ್ನು ಸಿದ್ಧಗೊಳಿಸಿ ಅಚ್ಚು ಹಾಕುವ ಕಾಲಕ್ಕೆ ನನಗೆ ವಿಶೇಷ ಅಸ್ವಸ್ಥತೆಯು ಒದಗಿದ್ದರಿಂದ ಡಾ॥ ಎಸ್. ಸಿ. ನಂದೀಮಠ ಎಮ್. ಏ. (ಪಿ. ಎಚ್. ಡಿ.) ಇವರು ವಿಜಾಪುರದಲ್ಲಿ ಕೆಲವು ದಿವಸ

ನಿಂತು ಈ ಗ್ರಂಥದ ಬಹುಭಾಗವನ್ನು ಬರೆಯಿಸಿ ತಿದ್ದಿ ಅಚ್ಚಿಗೆ ಸಿದ್ಧಗೊಳಿಸುವ ಕಾರ್ಯದಲ್ಲಿ ನನಗೆ ಬಹು ಸಹಾಯವಾದರು. ಇದಕ್ಕೋಸ್ಕರ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ.

ಇಷ್ಟೇ ಅಲ್ಲ, ಈ ಗ್ರಂಥವನ್ನು ಅಚ್ಚುಹಾಕುವ ಕಾರ್ಯದ ಸಹಾಯಕ್ಕೋಸ್ಕರ ಶ್ರೀಮಜ್ಜಗದ್ಗುರು ಹುಬ್ಬಳ್ಳಿಯ ಮೂರುಸಾವಿರ ಮಹಾ ಮಠಾಧೀಶರಾದ ಶ್ರೀ ಗುರುಸಿದ್ಧಯೋಗಿರಾಜ ದೇಶಿಕೇಂದ್ರರವರು ೫೦೦ ರೂಪಾಯಿಗಳನ್ನು ಕೊಟ್ಟು ಪ್ರೋತ್ಸಾಹಿಸಿದ್ದಕ್ಕೆ ನಾನು ಆ ಮಹಾನುಭಾವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ಈಗಿನ ಗ್ರಂಥದ ಪೀಠಿಕೆಯಲ್ಲಿ ಹೇಳಿದಂತೆ ಕುಮಾರ ಬಂಕನಾಥದೇವರ ಶಿಷ್ಯ ಭಕ್ತಿ ಭಂಡಾರಿ ಜಕ್ಕಣ್ಣನಿಗೆ ಷಟ್‌ಸ್ಥಲೋಪದೇಶವನ್ನು ಈ ಪ್ರಭುದೇವರ ವಚನಗಳ ಮೂಲಕ ಮಾಡಿದ್ದಾಗಿರುತ್ತದೆ. ಈ ವಚನಕ್ಕಿರುವ ಟೀಕೆಗಳಾದರೂ ಬಹುಭಾವ ಗರ್ಭಿತವೂ ವಿಚಾರಪ್ರೇರಕವೂ ಆಗಿರುತ್ತವೆ. ಈ ವಚನಗಳಲ್ಲದೆ ಪ್ರಭುದೇವರ ಇನ್ನೂ ಅಸಂಖ್ಯ ವಚನಗಳಿದ್ದು, ಅವುಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಕೂಡಿಸಿ ಇನ್ನೊಂದು ಪ್ರಭುದೇವರ ವಚನಗ್ರಂಥವನ್ನು ಪ್ರಸಿದ್ಧಿಸಬೇಕೆಂಬ ಯೋಚನೆಯು ಇರುತ್ತದೆ. ಆದರೆ ಈ ಕಾರ್ಯವು ಮಹತ್ತರವಾದದ್ದಿದ್ದು ಇದಕ್ಕೆ ಕೆಲಕಾಲವು ಬೇಕಾಗಬಹುದು. ಆದರೂ ಶಕ್ಯವಿದ್ದಷ್ಟರ ಮಟ್ಟಿಗೆ ಇವುಗಳನ್ನು ಕೂಡಿಸಿ ಇನ್ನೊಂದು ಪ್ರಭುದೇವರ ವಚನಗ್ರಂಥವನ್ನು ಆದಷ್ಟು ತೀವ್ರವಾಗಿ ಹೊರಪಡಿಸಲುದ್ದೇಶಪಟ್ಟಿರುತ್ತೇವೆ.

ಪುರಾತನ ಗ್ರಂಥಗಳನ್ನು ಶೋಧಿಸಿ, ಶುದ್ಧವಾಗಿ ಅಚ್ಚುಹಾಕುವ ಕಾರ್ಯವು ಯಾವಾಗಲೂ ಕಷ್ಟತರವಾದದ್ದು. ಆದರೂ ಶಕ್ಯವಿದ್ದಷ್ಟರ ಮಟ್ಟಿಗೆ ಈಗಿನ ಪ್ರತಿಯನ್ನು ನಾವು ಶುದ್ಧಗೊಳಿಸಲು ಪ್ರಯತ್ನಿಸಿದ್ದೇವೆ. ಹೀಗಿದ್ದರೂ ಗ್ರಂಥದಲ್ಲಿ ಅಲ್ಲಲ್ಲಿ ವಾಕ್ಯದೋಷಗಳೂ ಪ್ರಿಂಟಿನ ದೋಷಗಳೂ ಕಂಡುಬರಬಹುದು. ಇದಕ್ಕೋಸ್ಕರ ವಾಚಕರು ನಮ್ಮನ್ನು ಕ್ಷಮಿಸುವರೆಂದು ಪ್ರಾರ್ಥಿಸುತ್ತೇವೆ. ಪಾಠಾಂತರಗಳ ಬಗ್ಗೆ ಮತ್ತು ಇಂಥ ದೋಷಗಳ ಬಗ್ಗೆ ವಾಚಕರು ನಮಗೆ ತಿಳಿಸಿದಲ್ಲಿ, ನಾವು ಅವರಿಗೆ ಬಹಳ ಆಭಾರಿಯಾಗುವೆವು. ಮತ್ತು ಆ ಪ್ರಕಾರ ನಾವು ಮುಂದಿನ ಆವೃತ್ತಿಯಲ್ಲಿ ಸರಿಪಡಿಸುವೆವು.



ನಾವು ನಮ್ಮ ಪ್ರತಿಯನ್ನು ಅಚ್ಚಿಗೆ ಸಿದ್ಧಗೊಳಿಸುವ ಕಾರ್ಯದಲ್ಲಿ ಹಿಂದೆ ವಿವರಿಸಿದಂತೆ ೪ ಪ್ರತಿಗಳನ್ನು ಉಪಯೋಗಿಸಿದ್ದನ್ನು ವಿವರಿಸಿರುವೆವಷ್ಟೇ. ಈ ಪ್ರತಿಗಳೆಲ್ಲವೂ ಬಹುತರ ಒಂದೇ ಆಗಿರುತ್ತವೆ. ಆದರೆ ೧ ನೇ ಪ್ರತಿಯಲ್ಲಿ ಮಾತ್ರ "ಪ್ರಭುದೇವರ ಪಿಂಡಸಂಭವವಾದ ಗದ್ಯ" ಎಂಬ ಭಾಗವಿದ್ದು ಉಳಿದ ಪ್ರತಿಗಳಲ್ಲಿ ಇದು ಕಂಡುಬರುವದಿಲ್ಲ. ಇದನ್ನು ವಾಚಕರು ಲಕ್ಷಿಸತಕ್ಕದ್ದಾಗಿದೆ.

**ವಿಜಾಪುರ.**

ತಾ॥ ೭—೬—೩೧

**ಫ. ಗು. ಹಳಕಟ್ಟಿ.**
ಸಂಪಾದಕ

ಸ್ಥಲಗಳ ವಿವರ ———— ಪುಟ.


1) ಪಿಂಡಸ್ಥಲ - - - - - - - - 3 – 5
2) ಪಿಂಡಜ್ಞಾನ ಸ್ಥಲ - - - - - - 6 – 10
3) ಮಾಯಾ ವಿಲಾಸ ವಿಡಂಬನಸ್ಥಲ - - - - - 11 – 33
4) ಸಂಸಾರ ಹೇಯ ಸ್ಥಲ - - - - - - - 33 – 36
5) ಗುರು ಕರುಣಾಸ್ಥಲ - - - - - 36 – 43
6) ಭಕ್ತ ಸ್ಥಲ - - - - - - - - - 44 – ೭೦
7) ಮಹೇಶ್ವರ ಸ್ಥಲ - - - - - - - - ೭೧ – 84
8) ಪ್ರಸಾದಿ ಸ್ಥಲ - - - - - — - 85 – 90
9) ಪ್ರಾಣಲಿಂಗಿಸ್ಥಲ - - - - - - 91 – 156
10) ಶರಣ ಸ್ಥಲ - - - - 157 – 290
11) ಐಕ್ಯ ಸ್ಥಲ - - - - - - - 291 – 333

# ಪ್ರಭುದೇವರ ವಚನಗಳು.

ಸ್ವಸ್ತಿ ಸಮಸ್ತ ಭುವನ ಜನ ತಿಮಿರ ಹರ ಕಾರಣ ಸ್ವರೂಪರುಂ, ಭಕ್ತವತ್ಸಲರುಂ ಸರ್ವಾಂಗ ಪ್ರಾಣಲಿಂಗ ಮೂರ್ತಿನಿವಾಸರುಂ, ಪುಲಿಗೆರೆಯ ಪುರವರಾಧೀಶ್ವರರುಂ, ಅಪೂರ್ವ ಸ್ವಯಂಭು ಪ್ರಸನ್ನ ಚನ್ನ ದಕ್ಷಿಣ ಶ್ರೀ ಸೋಮನಾಥ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕರುಂ, ಶ್ರೀಕಾಂತ ನಿಷ್ಠರುಂ, ಋಗ್ಯಜುಃಸಾಮಾಥರ್ವಣಾಂತರ್ಗತ ಪ್ರತಿಪಾದ್ಯ ಪ್ರಮುಖರುಂ, ಶ್ರುತಿ - ಸ್ಮೃತಿ - ಪುರಾಣಾಗಮೇತಿಹಾಸಾದಿ ನಾನಾ ಶಾಸ್ತ್ರಕೋವಿದರುಂ, ಪರಮ ವೀರಶೈವಾಗಮಾಚಾರ್ಯರುಂ, ಸಕಲ ಪ್ರಸಾದ ಪಂಚಾಕ್ಷರೀ ಮಂತ್ರಸಿದ್ಧರುಂ, ನಿತ್ಯ ಪರಿಪೂರ್ಣ ಸಚ್ಚಿದಾನಂದ ನಿರಂಜನರುಂ, ಪರಂಜ್ಯೋತಿ ಸ್ವರೂಪರುಮಪ್ಪ ಪರಮ ಗುರುಮೂರ್ತಿ ಜಗದಾರಾಧ್ಯರುಮಪ್ಪ ಮಹಾಲಿಂಗದೇವರ ಅನಾದಿ ಸಂಸಿದ್ಧ ಗುರುಕುಳದನ್ವಯವೆಂತೆಂದೊಡೆ:—ಪ್ರಥಮದಲ್ಲಿ ನಿತ್ಯ ನಿರ್ಮಳ ನಿರಂಜನನಪ್ಪ ಪರಶಿವನು, ದ್ವಿತೀಯದಲ್ಲಿ ವಾಙ್ಮನಾತೀತನಪ್ಪ ನಂದಿಕೇಶ್ವರ ದೇವರು ತೃತೀಯದಲ್ಲಿ ಪರಮ ಋಷೀಶ್ವರನಪ್ಪ ದೂರ್ವಾಸ ದೇವರು, ಚತುರ್ಥದಲ್ಲಿ ದ್ವಿತೀಯ ಸ್ವಯಂಭು ತ್ರಿಣೇತ್ರ ದೇವರು, ಪಂಚಮದಲ್ಲಿ ಉರಿಲಿಂಗ ಪೆದ್ದಣ್ಣಂಗಳು, ಷಷ್ಠಮದಲ್ಲಿ ಸರ್ವೇಶ್ವರ ದೇವರು, ಸಪ್ತಮದಲ್ಲಿ ವಿಶ್ವೇಶ್ವರ ಪೆದ್ದಣ್ಣಗಳು, ಅಷ್ಟಮದಲ್ಲಿ ಸಂಹಿತೆಯ ಕಾಳಿದಾಸಭಟ್ಟರು, ನವಮದಲ್ಲಿ ಸದಾಶಿವ ದೇವರು, ದಶಮದಲ್ಲಿ ಪ್ರಣಮಿದೇವರು, ಏಕಾದಶದಲ್ಲಿ ಈಶಾನ್ಯದೇವರು, ದ್ವಾದಶದಲ್ಲಿ ಮೌನಿದೇವರು, ತ್ರಯೋದಶದಲ್ಲಿ ಚನ್ನಸೋಮದೇವರು, ಚತುರ್ದಶದಲ್ಲಿ ಬಾಗೆಯ ಬಂಕನಾಥದೇವರು, ಪಂಚದಶದಲ್ಲಿ ಶಂಕರ ದೇವರು, ಷೋಡಶದಲ್ಲಿ ಗಂಗಾಧರದೇವರು, ಸಪ್ತದಶದಲ್ಲಿ ಬಂಕನಾಥ ದೇವರು, ಅಷ್ಟದಶದಲ್ಲಿ ಪುರಾಣದ ಮಾಯಿದೇವ ಪಂಡಿತರು, ನವದಶದಲ್ಲಿ ಬಂಕಯ್ಯದೇವರು, ವಿಂಶತಿಯಲ್ಲಿ ಮಹಾಲಿಂಗದೇವರು, ಏಕವಿಂಶತಿಯಲ್ಲಿ ಕುಮಾರ ಬಂಕನಾಥ ದೇವರು, ಆ ಕುಮಾರ ಬಂಕನಾಥದೇವರ ದಿವ್ಯಜ್ಞಾನಾನಂದ ಕರಕಮಳದಲ್ಲಿ ಉದಯವಾದ ತಚ್ಛಿಷ್ಯ ಭಕ್ತಿ ಭಂಡಾರಿ ಜಕ್ಕಣ್ಣನು ಆ ಶ್ರೀ ಗುರುರಾಯಂಗೆ ಬಿನ್ನಪಂಗೆಯ್ವ, ಪರಮಗುರುವೇ,

ಪರಮಗುರುವೇ, ನಿಮ್ಮಡಿಗಳು ಎನ್ನ ಪೂರ್ವ ಜನ್ಮನಿವೃತ್ತಿಯಂ ಮಾಡಿ, ಪುನರ್ಜಾತನೆನಿಸಿ, ಅಂಗದಲ್ಲಿ ಲಿಂಗಪ್ರತಿಷ್ಠೆಯಂ ಮಾಡಿ, ಪ್ರಣವ ಪಂಚಾಕ್ಷರಿಯ ಪ್ರಾಣಸ್ಥಲದಲ್ಲಿ ಸ್ಥಾಪಿಸಿ. ಎನ್ನ ಕೃತಾರ್ಥನ ಮಾಡಿದಿರಿ ದೇವಾ. ಇನ್ನು ಎನ್ನ ಷಡಂಗವು ಲಿಂಗದಲ್ಲಿ ಲೀಯವಹ ಭೇದವಂ ನಿರೂಪವಂ ಕೊಟ್ಟು ಪಾಲಿಪುದೆಂದೊಡೆ, ಆ ಶ್ರೀಗುರು ಸ್ವಾಮಿ ತನ್ನ ಪರಮ ಜ್ಞಾನಾನುಭಾವ ಪ್ರಸನ್ನ ಪ್ರಕಾಶದಿಂದ ಷಟ್‌ಸ್ಥಲವನು ಪ್ರಭುದೇವರ ವಚನಂಗಳಿಂದ ಸಂಕಲ್ಪಿಸಿ, ಸುಲಲಿತ ವಾಕ್ಯಾಮೃತವಾಗಿ, ಆ ವಚನಂಗಳನು ಟೀಕಿಸಿ, ಪರಮಾರ್ಥ ತತ್ವಬೋಧೆಯನು ನಿರೂಪಿಸಿದ ಭೇದವೆಂತಿರ್ದು ದೆಂದೊಡೆ, ಮುಂದೆ ಪ್ರಥಮದಲ್ಲಿ ಪಿಂಡಸ್ಥಲವಾದುದು.

---

ಪ್ರಭುದೇವರ ಪಿಂಡಸಂಭವವಾದ ಗದ್ಯ. ನಿತ್ಯನಿರಂಜನ ಪರಂಜ್ಯೋತಿ ವಾಙ್ಮನಕ್ಕಗೋಚರಮಪ್ಪ ಶ್ರೀ ಪರಮೇಶ್ವರನು ಕೈಲಾಸದಲ್ಲಿಹ ಎಲ್ಲ ಶಿವಗಣಂಗಳೊಳಗೆ ಅತ್ಯಂತ ಶ್ರೇಷ್ಠನಾಗುತ್ತಿಹ ಮಾಯಾಕೋಲಾಹಲನೆಂಬ ಗಣೇಶ್ವರನು ಒಪ್ಪುತ್ತಿರಲು ಆ ಮಾಯೆಯೊಂದು ದಿನ ಶ್ರೀ ಪಾರ್ವತೀದೇವಿಯವರು ಪರಮೇಶ್ವರನ ಕೂಡೆ ಸಂವಾದಿಸಿ ಈ ಮಾಯಾ ಕೋಲಾಹಲನೆಂಬ ಗಣೇಶ್ವರನು ಆ ಮಾಯೆ ತೋರಿದ ಪರಿ ಎಂತು, ಈತನ ಮಾಯಾಸಕಲನ ಮಾಡಿ ತೋರುವೆನೆಂದು ಪ್ರತಿಜ್ಞೆಯಂ ಮಾಡಿ ತನ್ನ ಓಲಗದ ವಾದ್ಯವ ಬಾರಿಸುವ ಒಬ್ಬ ರುದ್ರ ಕನ್ನಿಕೆಯ ಕರೆದು ನೀನು ಈ ಮಾಯಾ ಕೋಲಾಹಲನೆಂಬ ಗಣೇಶ್ವರನ ಸೋಲಿಸಿ ಬಾ ಎಂದು ನಿರೂಪಿಸಲು ಮಹಾ ಪ್ರಸಾದವೆಂದು ಅನುಜ್ಞೆಯಂ ಕೈಕೊಂಡು ಆ ರುದ್ರ ಕನ್ನಿಕೆ ಶಿವನ ಓಲಗಕ್ಕೆ ಬಪ್ಪ ದಾರಿಯೊಳು ತನ್ನ ಮಾಯಾ ವಿಲಾಸ ಸ್ವರೂಪವಂ ತೋರಿ ನೆರೆಯುತ್ತ ಮುಂದೆ ಬಂದು ನಿಂದಿರಲು ಆ ಗಣೇಶ್ವರನು ಬರುತ ಆ ಕನ್ನಿಕೆಯ ರೂಪಲಾವಣ್ಯವಂ ಕಂಡು ಮನ ಮುಟ್ಟಿ ಹಾರೈಸಿ ತನ್ನ ತಾನೆಚ್ಚತ್ತು ಹಾ ಎಂದು ಬೆರಗಾಗಿ ಎನಗೀ ಮಾಯಾಧೀನ ಸಂಬಂಧಿಸಿತಲ್ಲಾ ಎನುತ್ತ ಚಿಂತಾಕ್ರಾಂತನಾಗಿ ಶಿವನೋಲಗಕ್ಕೆ ಬರಲು ಅವನು ಆ ಗಣೇಶ್ವರನ ಸ್ಥಿತಿಯನರಿದು ನೀನು ಮಾಯೆಗೆ ಮನಸೋತ ಕಾರಣ ಮಾಯಾಧೀನನಾಗಿ ಮರ್ತ್ಯದಲ್ಲಿ ಹುಟ್ಟಿ ಹೋಗೆನಲು, ದೇವಾ, ನಾನು ಮರ್ತ್ಯದಲ್ಲಿ ಹುಟ್ಟಿ ನಿಮ್ಮನೆಂತರಿವೆನೆನಲು ಅದಕ್ಕೆ ನೀನು ಅಂಜದಿರು, ನಾನು ನಿನ್ನ ಮುಸುಕಿದ ಮಾಯೆಯಂ ನಿವೃತ್ತಿಯ



ಮಾಡಿ ನಿನ್ನ ಸಂಸಾರ ಬಂಧನವಂ ಬಿಡಿಸಿ ನಿನ್ನ ಅಂತರಂಗದಲ್ಲಿ ನಾನು ಗುರುಮೂರ್ತಿಯಾಗಿ ಬಹಿರಂಗದಲ್ಲಿ ಅನುಮಿಷನೆಂಬ ಗುರುಮೂರ್ತಿಯಾಗಿ ನಿನ್ನ ಕರಸ್ಥಲಕ್ಕೆ ಮಹಾಲಿಂಗವಂ ತೋರಿಸಿಕೊಟ್ಟು ಸದ್ಯೋನ್ಮುಕ್ತನಂ ಮಾಡಿದಪೆನು. ನೀನು ಮರ್ತ್ಯದಲ್ಲಿ ಹೋಗಿ ಶ್ರೀ ವೀರಶೈವಾಚಾರಕ್ಕೆ ಪ್ರಥಮಾಚಾರ್ಯ ಪುರುಷನಾದಪೆ. ನಿನ್ನಿಂದ ಮರ್ತ್ಯ ಲೋಕದ ಮಹಾ ಗಣಂಗಳೆಲ್ಲರು ಕೃತಾರ್ಥರಾದಪರು, ಹೋಗೆಂದು ಶಿವನು ಅಭಯ ಹಸ್ತವಂ ಕೊಡಲು ಮಹಾ ಪ್ರಸಾದವೆಂದನುಜ್ಞೆಯಂ ಕೈಕೊಂಡು ಮಾನುಷಾಕಾರ ಚೈತನ್ಯ ಕಳೆಯ ಧರಿಸಿ ಮೇರುವಿಂಗೆ ದಕ್ಷಿಣ ಭಾಗದ ಜಂಬೂ ದ್ವೀಪದ ಮಧ್ಯದೊಳು ನಾಗವಸಾಧಿಪತಿ ಎಂಬ ಶಿವಭಕ್ತನ ಸತಿ ಸುಜ್ಞಾನ ದೇವಿಯ ಬಸಿರಲ್ಲಿ ಕಳಾಪ್ರವೇಶಿತನಾಗಿ ಜನಿಸಿ ಅಲ್ಲಮನೆಂಬ ನಾಮವಂ ಧರಿಸಿರಲು ಆ ರುದ್ರ ಕನ್ನಿಕೆಯು ಶಿವನಿರೂಪದಿಂದ ಆ ಪುರದಲೊಬ್ಬ ಶಿವಭಕ್ತನ ಬಸಿರಲ್ಲಿ ಜನಿಸಿ ಕಾಮಲತೆ ಎಂಬ ನಾಮವಂ ಧರಿಸಿರಲು ಆ ಸ್ತ್ರೀಗೆ ತಾನು ಪುರುಷನಾಗಿ ಸುಖ ಸಂಗದಿ ಕೆಲವು ಸಂವತ್ಸರಂಗಳಂ ಕಳೆಯಲು ಆ ಕಾಮಲತೆಯು ವಿಶ್ರಾಪವನೈದಿ ತನಗೆಯು ಶ್ರೀ ಪರಮೇಶ್ವರನ ಕರುಣ ಪ್ರಸನ್ನಮಪ್ಪ ಕಾಲದೊಳು ಅಲ್ಲಮ ಪ್ರಭುರಾಯನ ಸಂಗದೊಳಗಡಗಿರ್ದ ಶಿವ ತತ್ವ ದರ್ಶನವೆಂತಿರ್ದುದೆಂದಡೆ,

**ಪ್ರಥಮದಲ್ಲಿ ಪಿಂಡಸ್ಥಲವಾದದು.**

---

## ಪಿಂಡಸ್ಥಲ.

೧. ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ಶರಣಸಂಬಂಧ.

ಟೀಕು:—ಶಿಲೆಯೊಳಗಿಪ್ಪ ಅಗ್ನಿ ವೈದೋರದ ಹಾಗೆ, ಪರಬ್ರಹ್ಮವು ಪಿಂಡಸ್ಥವಾಗಿದ್ದು ಕಾಣಿಸಬಾರದೆಂಬುದೀಗ, ಶಿಲೆಯೊಳಗಣ ಪಾವಕನಂತೆ ಎಂಬ ಶಬ್ದಕ್ಕರ್ಥ. ಅವುದಾನೊಂದು ಪ್ರತಿಬಿಂಬವು ಉದಕದೊಳಗಿರ್ದು, ಉದಕದ ಗುಣಧರ್ಮ ಕರ್ಮವ ಹೊದ್ದದ ಹಾಗೆ, ಆ ಪರಬ್ರಹ್ಮವು ಪಿಂಡ

ಸ್ಥವಾಗಿರ್ದು, ಆ ಪಿಂಡದ ಗುಣ ಧರ್ಮ ಕರ್ಮವ ಹೊದ್ದದಿಪ್ಪುದೀಗ, ಉದಕದೊಳಗಣ ಪ್ರತಿಬಿಂಬದಂತೆ ಎಂಬ ಶಬ್ದಕ್ಕರ್ಥ. ಬೀಜದೊಳಗಣ ವೃಕ್ಷದ ಹಾಗೆ, ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಪಿಂಡದ ಮಧ್ಯದಲ್ಲಿ ಗೂಢವಾಗಿಪ್ಪುದೆಂಬುದೀಗ, ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕ್ಕರ್ಥ. ಶಬ್ದದೊಳಗೆ ನಿಶ್ಶಬ್ದವಿದ್ದುದನು ಭೇದಿಸಬಾರದ ಹಾಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು, ಅಭೇದ್ಯವಾಗಿಪ್ಪುದೆಂಬುದೀಗ ಶಬ್ದದೊಳಗಣ ನಿಶ್ಶಬ್ದದಂತೆ ಎಂಬುದಕ್ಕರ್ಥ. ಇದು ಪಿಂಡಸಂಭವ ನಿರ್ವಚನ.

೨. ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ? ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ? ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು ಗುಹೇಶ್ವರಾ ನಿಮ್ಮ ನಿಲವ ಅನುಭವ ಸುಖಿ ಬಲ್ಲ.

ಟೀಕು:— ಶಿಲೆಯೊಳಗಿಪ್ಪ ಅಗ್ನಿ ಸ್ಫುರಿಸದಂತೆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಆ ಪಿಂಡದಿಂದ ವ್ಯತಿರಿಕ್ತವಾಗಿ ತೋರಲರಿಯದೆಂಬುದೀಗ ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ ಎಂಬ ಶಬ್ದಕ್ಕರ್ಥ. ಬೀಜದೊಳಗಡಗಿಪ್ಪ ವೃಕ್ಷದಂತೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ವ್ಯಕ್ತವಾಗದಿಪ್ಪುದೀಗ ಬೀಜದೊಳಗಣ ವೃಕ್ಷ ಉಲಿಯಬಲ್ಲುದೇ ಎಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವು ತಾನೊಂದಕ್ಕೆಯು ತೋರಲಿಲ್ಲಾಗಿ, ತೋರಲಿಲ್ಲಾಗಿ ಬೀರಲಿಲ್ಲಾರಿಗೆಯೂ ಎಂಬ ಶಬ್ದಕ್ಕರ್ಥ. ಈ ನಿಲವನಾರು ಬಲ್ಲರೆಂದಡೆ ಇದಂ ಹಮ್ಮೆಂಬ ಉಭಯವಳಿದ ಮಹಾನುಭಾವಿ ಬಲ್ಲನೆಂಬುದೀಗ ಅನುಭವ ಸುಖಿ ಬಲ್ಲನೆಂಬ ಶಬ್ದಕ್ಕರ್ಥ.

೩. ಜಲದೊಳಗಿರ್ದ ಕಿಚ್ಚು ಜಲವ ಸುಡದೆ, ಜಲವು ತಾನಾಗಿಯೆ ಇದ್ದಿತ್ತು ನೋಡಾ. ನೆಲೆಯನರಿದು ನೋಡಿಹೆನೆಂದಡೆ, ಅದು ಜಲವು ತಾನಲ್ಲ. ಕುಲದೊಳಗಿರ್ದು ಕುಲವ ಬೆರಸದೆ ನೆಲೆಗೆಟ್ಟು ನಿಂದುದನಾರು ಬಲ್ಲರು? ಹೊರಗೋಳಗೆ ತಾನಾಗಿರ್ದು ಮತ್ತೆ ತಲೆದೋರದಿಪ್ಪುದು ಗುಹೇಶ್ವರಾ ನಿಮ್ಮ ನಿಲವು ನೋಡಾ.

ಟೀಕು:— ಶುಕ್ಲ ಶೋಣಿತಾತ್ಮ ಸಂಗದಿಂದಾದ ಜಲಬುದ್ಬುದ ಪಿಂಡದೊಳಗೆ ಅಡಗಿಪ್ಪ ಪರಶಿವ ಜ್ಞಾನಾಗ್ನಿ ಜಡಪಿಂಡವ ದಗ್ಧವ ಮಾಡಲರಿಯದಲ್ಲಿಯೇ ಗತವಾಗಿ ತದ್ರೂಪಾಗಿದ್ದಿತ್ತೆಂಬುದೀಗ, ಜಲದೊಳಗಿರ್ದ



ಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತೆಂಬ ಶಬ್ದಕ್ಕರ್ಥ. ವಿವೇಕದಿಂದ ತಿಳಿದು ನೋಡಿದಡೆ ಆ ಶಿವಜ್ಞಾನ ಜಡಪಿಂಡರೂಪಲ್ಲವೆಂಬುದೀಗ ನೆಲೆಯನರಿಯಬಲ್ಲಡೆ ಅದು ಜಲವು ತಾನಲ್ಲವೆಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಜಾತಿ ವರ್ಣಾಶ್ರಮ ಕುಲಗೋತ್ರ ನಾಮಂಗಳೊಳಗೆ ವೇಧಿಸಿಕೊಂಡಿರ್ದು ಹೊದ್ದಿಯೂ ಹೊದ್ದದೆ ಸರ್ವತೋಧಿಕವಾಗಿದ್ದಿತ್ತೆಂಬುದೀಗ ಕುಲದೊಳಗಿರ್ದು ಕುಲವ ಬೆರಸದೆ ನೆಲೆಗೆಟ್ಟುಹೋಗಿ ನಿಂದುದನಾರು ಬಲ್ಲರು ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಅಂತರಂಗ ಬಹಿರಂಗದೊಳಗೆ ಪರಿಪೂರ್ಣವಾಗಿರ್ದು ಅನ್ಯವಾಗಿ ತೋರಿಸಿಕೊಳ್ಳಲರಿಯದೆ ಗೋಪ್ಯವಾಗಿಪ್ಪುದೆಂಬುದೀಗ ಒಳಹೊರಗೆ ತಾನಾಗಿ ಮತ್ತೆ ತಲೆದೋರದಿಪ್ಪುದು ಗುಹೇಶ್ವರಾ ನಿಮ್ಮ ನಿಲವು ನೋಡಾ ಎಂಬ ಶಬ್ದಕ್ಕರ್ಥ.

೪. ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿರ್ದ ಮಿಂಚಿನಂತೆ, ಬಯಲ ಮರೆಯಲಡಗಿರ್ದ ಮರೀಚನಂತೆ ಕಂಗಳ ಮರೆಯಲಡಗಿರ್ದ ಬೆಳಗಿನಂತೆ ಗುಹೇಶ್ವರಾ ನಿಮ್ಮ ನಿಲವು.

ಟೀಕು:—ಭೂಗತವಾಗಿಪ್ಪ ನಿಧಾನದಂತೆ, ಪರಬ್ರಹ್ಮವು ಪಿಂಡಮಧ್ಯದಲ್ಲಿ ಗತವಾಗಿ ಕಾಣಬಾರದಿಪ್ಪುದೀಗ, ನೆಲದ ಮರೆಯ ನಿಧಾನದಂತೆ ಎಂಬ ಶಬ್ದಕ್ಕರ್ಥ. ಮೇಘದೊಳಗೆ ಸ್ಫುರಿಸದಿಪ್ಪ ಕ್ಷಣಿಕದಂತೆ ಆ ಪರಬ್ರಹ್ಮವು ಪಿಂಡ ಮಧ್ಯದೊಳಗೆ ಇರ್ದು ಬೇರಿಟ್ಟು ತೋರಲರಿಯದೆಂಬುದೀಗ, ಮುಗಿಲ ಮರೆಯ ಮಿಂಚಿನಂತೆ ಎಂಬ ಶಬ್ದಕ್ಕರ್ಥ. ಬಯಲೊಳಗಡಗಿದ ಮರೀಚಿಯ ನಿಃಕಂಪಿತದಂತೆ, ಆ ಪರಬ್ರಹ್ಮವು ಪಿಂಡದೊಳಗಿರ್ದು ನಿಶ್ಚಲವಾಗಿಪ್ಪುದೆಂಬುದೀಗ ಬಯಲ ಮರೆಯಲಡಗಿದ ಮರೀಚನಂತೆ ಎಂಬ ಶಬ್ದಕ್ಕರ್ಥ. ಕಂಗಳ ಪಟಲದೊಳಗಿರ್ಪ ಪ್ರಭೆ ಕಂಗಳಿಂದ ವ್ಯತಿರಿಕ್ತವಾಗಿ ವಿವರಿಸಬಾರದಂತೆ, ಆ ಪರಬ್ರಹ್ಮವು ಪಿಂಡಸ್ಥವಾಗಿಪ್ಪುದು. ಅದ ವಿವರಿಸಬಾರದೆಂಬುದೀಗ ಕಂಗಳ ಮರೆಯಲಡಗಿರ್ದ ಪ್ರಭೆಯಂತೆ ಎಂಬ ಶಬ್ದಕ್ಕರ್ಥ.

**ಇದು ಪಿಂಡದ ನಿಜದ ನಿಲವು. ಪಿಂಡಸ್ಥಲ ಸಮಾಪ್ತ.**

ಇಂತಪ್ಪ ಮಹಾಪಿಂಡಸ್ಥಲವು ತಾ ತನ್ನ ಲೀಲೆಯಿಂ ತನ್ನೊಳಗಡಗಿದ ಸಕಲ ನಿಷ್ಕಲಾತ್ಮ ತತ್ವಂಗಳನುಂಟು ಮಾಡಿ ತೋರಬೇಕೆಂದು ಇಚ್ಛೈಸಲು ಜ್ಞಾನೋದಯವಾಯಿತ್ತಾಗಿ ಮುಂದೆ ಪಿಂಡಜ್ಞಾನಸ್ಥಲದ ವಚನ.

## ಪಿಂಡಜ್ಞಾನಸ್ಥಲ.

೫. ಆದಿಯಾಧಾರವಿಲ್ಲದಂದು ಹಮ್ಮು ಬಿಮ್ಮುಗಳಿಲ್ಲದಂದು ಸುರಾಳ ನಿರಾಳವಿಲ್ಲದಂದು ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರಾ ನಿಮ್ಮ ಶರಣನುದಯಿಸಿದನಂದು ॥೫॥

ಟೀಕು:— ಆದಿಯಾಧಾರವೆಂಬೆರಡು ಕುರುಹುಗೊಳಿಸದ ಮುನ್ನ ಎಂಬುದೀಗ ಆದಿ ಆಧಾರವಿಲ್ಲದಂದು ಎಂಬ ಶಬ್ದಕ್ಕರ್ಥ ಮದಹಂಕಾರ ಪೈದೋರದ ಮುನ್ನವೆಂಬುದೀಗ ಹಮ್ಮು ಬಿಮ್ಮು ಇಲ್ಲದಂದು ಎಂಬ ಶಬ್ದಕ್ಕರ್ಥ. ಸಕಳ ನಿಃಕಳವೆಂಬೆರಡು ಹುಟ್ಟದಂದು ಎಂಬುದೀಗ ಸುರಾಳ ನಿರಾಳವಿಲ್ಲದಂದು ಎಂಬ ಶಬ್ದಕ್ಕರ್ಥ. ಸಮಸ್ತ ಲೋಕ ಪ್ರಪಂಚು ಪಸರಿಸದಂದು ಎಂಬುದೀಗ ಸಚರಾಚರವೆಲ್ಲ ರಚನೆಗೆ ಬಾರದಂದು ಎಂಬ ಶಬ್ದಕ್ಕರ್ಥ. ಇವಾವಾವು ಇಲ್ಲದಂದು ಇಪ್ಪ ಮಹಾಘನದೊಳಗೆ ಚಿಚ್ಛಕ್ತಿ ಹುಟ್ಟಲು ಆ ಚಿಚ್ಛಕ್ತಿಯ ಸ್ವರೂಪವೇ ಶರಣ ರೂಪಾಗಿ ಉದಯವಾಯಿತ್ತೆಂಬುದೀಗ ಗುಹೇಶ್ವರನ ಶರಣನುದಿಸಿದನಂದು ಎಂಬ ಶಬ್ದಕ್ಕರ್ಥ. ೫

೬. ನಾದಬಿಂದುಗಳಿಲ್ಲದಂದು, ನಿರ್ಭಯನೆಂಬ ಗಣೇಶ್ವರನು. ಉತ್ಪತ್ತಿ ಸ್ಥಿತಿಲಯುವಿಲ್ಲದಂದು, ಅಕ್ಷಯನೆಂಬ ಗಣೇಶ್ವರನು. ಓದು ವೇದಂಗಳಿಲ್ಲದಂದು ಓಂಕಾರನೆಂಬ ಗಣೇಶ್ವರನು. ಯುಗ ಜುಗವಿಲ್ಲದಂದು ಊರ್ಧ್ವಮುಖನೆಂಬ ಗಣೇಶ್ವರನು. ಗುಹೇಶ್ವರನೆಂಬ ಲಿಂಗವಿಲ್ಲದಂದು ನಿರ್ವಾಯನೆಂಬ ಗಣೇಶ್ವರನು.

ಟೀಕು:— ನಾದಬಿಂದು ಸಂಜ್ಞೆಯಪ್ಪ ಶಿವಶಕ್ತಿ ಪಿಂಡವ ಧರಿಸಿದ ಶಂಕೆಯ ಭಯವು ಎನ್ನಿಂದಾಯಿತ್ತಲ್ಲದೆ, ಆ ನಾದಬಿಂದುವಿಲ್ಲದ ತಾನು ನಿರ್ಭಯನೆಂಬದೀಗ ನಾದಬಿಂದುವಿಲ್ಲದಂದು ನಾನು ನಿರ್ಭಯನೆಂಬ



ಗಣೇಶ್ವರನು ಎಂಬ ಶಬ್ದಕ್ಕರ್ಥ. ಉತ್ಪತ್ತಿ ಸ್ಥಿತಿ ಲಯುವಿಲ್ಲದಂದು ಅನಿತ್ಯಭಾವವೆಂಬುದೆನ್ನಿಂದಾಯಿತ್ತಲ್ಲದೆ, ಆ ಉತ್ಪತ್ತಿ ಸ್ಥಿತಿಲಯುದವ ನಾನಲ್ಲ. ನಾನು ಅಕ್ಷಯನೆಂಬುದೀಗ ಉತ್ಪತ್ತಿ ಸ್ಥಿತಿಲಯುವಿಲ್ಲದಂದು ನಾನು ಅಕ್ಷಯನೆಂಬ ಗಣೇಶ್ವರನು ಎಂಬ ಶಬ್ದಕ್ಕರ್ಥ. ಅದು ಬ್ರಹ್ಮ ಇದು ಬ್ರಹ್ಮವೆಂದು ವಚಿಸುವ ಶೃತಿಪ್ರಮಾಣವಾಕ್ಯ ಎನ್ನಿಂದಾಯಿತ್ತಲ್ಲದೆ, ಈ ಉಲುಹಿಲ್ಲದೊಡೆ ನಾನು ಪ್ರಣವರೂಪನೆಂಬುದೀಗ ಓದು ವೇದಂಗಳಿಲ್ಲದಂದು, ಓಂಕಾರನೆಂಬ ಗಣೇಶ್ವರನೆಂಬ ಶಬ್ದಕ್ಕರ್ಥ. ಯುಗ ಜುಗ ಬ್ರಹ್ಮಾಂಡಂಗಳೆಂಬ ಅಧೋಮುಖ ಎನ್ನ ಉದಯುದಿಂದಾದವಲ್ಲದೆ, ನಾನು ಊರ್ಧ್ವಮುಖನೆಂಬುದೀಗ ಯುಗ ಜುಗಂಗಳಿಲ್ಲದಂದು ಊರ್ಧ್ವಮುಖನೆಂಬ ಗಣೇಶ್ವರನೆಂಬ ಶಬ್ದಕ್ಕರ್ಥ. ನಾನು ಲಿಂಗವೆಂಬುಭಯ ಸಂದೇಹ ಭ್ರಾಂತು ಎನ್ನಿಂದಾಯಿತ್ತಲ್ಲದೆ, ಈ ಸಂದೇಹ ಭ್ರಾಂತಳಿದಡೆ, ನಾನು ನಿರ್ವಾಯನೆಂಬುದೀಗ ಗುಹೇಶ್ವರಲಿಂಗವಿಲ್ಲದಂದು ನಾನು ನಿರ್ವಾಯನೆಂಬ ಗಣೇಶ್ವರನೆಂಬ ಶಬ್ದಕ್ಕರ್ಥ.

೭. ಅಯ್ಯಾ, ಜಲ ಕೂರ್ಮ ಗಜ ಫಣಿಯ ಮೇಲೆ ಧರೆ ವಿಸ್ತರಿಸಿ ನಿಲ್ಲದಂದು, ಗಗನವಿಲ್ಲದಂದು, ಪವನನ ಸುಳುಹಿಲ್ಲದಂದು, ಅಗ್ನಿಗೆ ಕಳೆದೋರದಂದು, ತರುಗಿರಿ ತೃಣ ಕಾಷ್ಠಂಗಳಿಲ್ಲದಂದು, ಯುಗ ಜುಗ ಮಿಗಿಲೆನಿಸಿ ನಿಂದ ಹದಿನಾಲ್ಕು ಭುವನ ನೆಲೆಗೊಳ್ಳದಂದು, ನಿಜವನರಿದಿಹೆನೆಂಬ ತ್ರಿಜಗದಾಧಿಪತಿಗಳಿಲ್ಲದಂದು ತೋರುವ ಬೀರುವ ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರ ಲಿಂಗವು.

ಟೀಕು.—ಪಂಚಭೂತಾದಿ ಸ್ಥಾವರ ಜಂಗಮವಿಲ್ಲದಂದು ಸ್ವಯಂಭುವಾಗಿಪ್ಪದು ನಿಜವೆಂಬುದೀಗ ಜಲಕೂರ್ಮಗಜ ಫಣಿಯ ಮೇಲೆ ಧರೆ ವಿಸ್ತರಿಸಿ ನಿಲ್ಲದಂದು, ಗಗನವಿಲ್ಲದಂದು ಪವನನ ಸುಳುಹಿಲ್ಲದಂದು, ಅಗ್ನಿಗೆ ಕಳೆದೋರದಂದು, ತರುಗಿರಿ ತೃಣಕಾಷ್ಠಾದಿಗಳಿಲ್ಲದಂದು ಎಂಬ ಶಬ್ದಕ್ಕರ್ಥ. ಯುಗಜುಗ ಮಿಗಿಲೆನಿಸಿ ನಿಂದ ಹದಿನಾಲ್ಕು ಭುವನ ನೆಲೆಗೊಳ್ಳದಂದು ನಿಜವು ಸ್ವಯಂಭುವೆಂಬುದೀಗ ಕಾಣ ಬಂದರ್ಥ. ಆ ನಿಜವ ಕಂಡಿಹೆನರಿದಿಹೆನೆಂಬ ಬ್ರಹ್ಮ ವಿಷ್ಣು ರುದ್ರರುಗಳಿಲ್ಲದಂದು ಎಂಬುದೀಗ ನಿಜವನರಿದಿಹೆನೆಂಬ ತ್ರಿಜಗದಾಧಿಪತಿಗಳಿಲ್ಲದಂದು ಎಂಬ ಶಬ್ದಕ್ಕರ್ಥ. ಈ ಭಾವವು ಇಲ್ಲದಂದು ಆ ಪರಬ್ರಹ್ಮವೆಲ್ಲ ನಿಜವಾಗಿಪ್ಪದೆಂದು ತನಗೆ ತೋರುವ ಬೀರುವ ಭಾವದೊಳಗೆ ಆ ವಸ್ತು ತದ್ಗತವಾಗಿ ಭರಿತವಾಗಿ

ನಿರ್ಗಮನವಾಗಿಪ್ಪುದೆಂಬುದೀಗ ತೋರುವ ಬೀರುವ ಭಾವದ ಪರಿಯು ಆ ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರನೆಂಬ ಶಬ್ದಕ್ಕರ್ಥ.

೮. ಅಯ್ಯಾ, ನೀನು ನಿರಾಳ ನಿರ್ಮಾಯನಾಗಿಪ್ಪೆಯಾಗಿ, ಆಕಾಶದ ಪ್ರಕಾಶವಿಲ್ಲದಂದು, ಸಾಕ್ಷಿಸಭೆಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು, ಆಧಾರದೊಳಗಣ ವಿಭೂತಿಯನೆ ತೆಗೆದು, ಭೂಮಿಯ ನೆಲೆಗೊಳಿಸಿ, ಪಂಚಾಶತ್‌ಕೋಟಿ ವಿಸ್ತೀರ್ಣ ಭೂಮಂಡಲಕ್ಕೆ ಸುತ್ತಿ ಹರಿವ ಸಪ್ತಸಾಗರಂಗಳು ಎಂಭತ್ತಾರು ಕೋಟಿಯು ತೊಂಭತ್ತೇಳು ಲಕ್ಷ ಕಾಲ ಭುವನ ಮಂಡಲಕ್ಕೆ ಉದಯ ಬ್ರಹ್ಮಾಂಡ ಆರುವತ್ತಾರುಕೋಟಿ ತಾರಾಮಂಡಲವೆಂದಡೆ, ಬೆಳಗಿ ತೋರಿದ ಹನ್ನೆರಡು ಜ್ಯೋತಿಯ, ನಿಲಿಸಿ ತೋರಿದ ಹದಿನಾಲ್ಕು ಭುವನವ. ಈ ಜಗದ ಜಂಗುಳಿಯ ಕಾವ ಗೋವಳ ತಾನಾಗಿ ಚೌರಾಶಿ ಲಕ್ಷ ಜೀವರಾಶಿಗಳಿಗೆ ರಾಶಿವಾಳ ತಾನಾಗಿ ಸಕಲರ ಅಳಿವಿನ ಉಳಿವಿನ ನಿಂದ ನಿಜವ ನೋಡಿ ಕಂಡೆನು ಗುಹೇಶ್ವರಾ ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

ಟೀಕು:— ನಿರಾಳ ನಿರ್ಮಾಯನಾಗುತ್ತಿಹ ಪರಶಿವನು, ಆಕಾಶ ಪ್ರಕಾಶಿಸದಂದು ನಿಜವಾಗಿದ್ದನೆಂಬುದೀಗ ಕಾಣ ಬಂದರ್ಥ. ತನ್ನ ನಿಜವನುಸುರಿಹೆನೆಂದಡೆ ತನ್ನಿಂದನ್ಯವಾರೂ ಇಲ್ಲವೆಂಬುದೀಗ ಸಾಕ್ಷಿ ಸಭೆಗಳಿಲ್ಲದಂದು ಎಂಬ ಶಬ್ದಕ್ಕರ್ಥ. ಸಚರಾಚರವೆಲ್ಲ ರಚನೆಗೆ ಬಾರದಂದು ನಿಜವಾಗಿದ್ದನೆಂಬುದೀಗ ಕಾಣ ಬಂದರ್ಥ. ಇಂತು ಇವಾವಾವು ಇಲ್ಲದಂದು ಜಗತ್ ಸೃಷ್ಟ್ಯರ್ಥಕಾರಣವಾಗಿ ತನ್ನ ಮಹದಹಂಕಾರ ಭೂಷಣಮಪ್ಪ ಚಿದ್ವಿಭೂತಿಯನು ಆತ್ಮಾಂತರ್ಗತ ಸ್ಥಾನದಿಂ ಬಹಿರ್ಗತವ ಮಾಡಲು, ಅದೇ ಚಿಚ್ಛಕ್ತಿ ಸ್ವರೂಪವಾಗಿ, ಚಿತ್ತಾಯತೆ ಧಾತುಬದ್ಧಂ ಶರೀರಸ್ಥಂ ಎನಿಸಿಕೊಂಡಿತ್ತಾಗಿ ಆಧಾರದೊಳಗಣ ವಿಭೂತಿಯನೆ ತೆಗೆದು ಭೂಮಿಯ ನೆಲೆಗೊಳಿಸಿದನೆಂಬ ಶಬ್ದಕ್ಕರ್ಥ. ಆ ಚಿತ್‌ಶಕ್ತಿಯಿಂದ ಪಂಚಸಾದಾಖ್ಯ ತತ್ವಂಗಳುದಯಿಸಿದವು. ಆ ಸಾದಾಖ್ಯ ತತ್ವಂಗಳಿಂದ ಅಷ್ಟತನುಗಳುದಯಿಸಿದವು. ಆ ಅಷ್ಟತನುಗಳಿಂದ ಬ್ರಹ್ಮಾಂಡವಾದಿಯಾದ ನಾನಾ ಪ್ರಪಂಚುಗಳುದಯಿಸಿದವೆಂಬುದರೊಳಗೆ, ಬ್ರಹ್ಮಾಂಡ ವಳಯ, ಸೂರ್ಯಮಂಡಲ, ತಾರಾಮಂಡಲ, ಚತುರ್ದಶಭುವನ ಕಾಲ ಕಲ್ಪಿತ ಪ್ರಮಾಣಂಗಳೆಲ್ಲವು ಅಡಗಿದವೆಂಬುದು ಕಾಣ ಬಂದರ್ಥ. ಚೌರಾಶಿಲಕ್ಷ ಜೀವ



ರಾಸಿಗಳಿಗೆ ಆ ಪರವಸ್ತುವೇ ಕರ್ತೃವೆಂಬುದು ಕಾಣಬಂದರ್ಥ. ಇಂತು ದಯಿಸಿದ ಸಮಸ್ತ ಪ್ರಪಂಚುಗಳು ಎಲ್ಲಿ ಅಡಗಿದವೆಂದರೆ "ಯದ್ದೃಷ್ಟಂ ತನ್ನಷ್ಟಂ" ಎಂದುದಾಗಿ, ಆ ಮಹತ್ತಿನೊಳಗಡಗಿದವೆಂಬುದು ಸಕಲರ ಅಳಿವಿನ ಉಳಿವಿನ ಎಂಬ ಶಬ್ದಕ್ಕರ್ಥ. ಆ ಉಳಿವೆಯು ಸುಜ್ಞಾನದೀಪ್ತಿಯಂ ಕಂಡೆನೆಂಬುದು ನೋಡಿ ಕಂಡೆನೆಂಬುದಕ್ಕರ್ಥ.

೯. ತಲೆ ಇಲ್ಲದ ತಲೆಯಾತಂಗೆ ಕರುಳಿಲ್ಲದ ಒಡಲು ನೋಡಾ. ಅನಲಂಗೆ ಅಂಗವಿಲ್ಲ. ದಂಗನೆ ಸತಿಯಾಗಿಪ್ಪಳು. ಇವರಿಬ್ಬರ ಬಸಿರಲ್ಲಿ ಹುಟ್ಟಿದಳೆಮ್ಮ ತಾಯಿ. ನಾ ಹುಟ್ಟಿ ತಾಯ ಕೈವಿಡಿದು ಸಂಗವ ಮಾಡಿ ನಿರ್ದೋಷಿಯಾದೆನು ಕಾಣಾ ಗುಹೇಶ್ವರಾ.

ಟೀಕು:— ಜ್ಞಾನದ ತೂರ್ಯವೆಂಬ ವೃತ್ತಿಜ್ಞಾನವಳಿದು ಶುದ್ಧಜ್ಞಪ್ತಿಯೇ ತಲೆ ಇಲ್ಲದ ತಲೆ ಎಂಬ ಶಬ್ದಕ್ಕರ್ಥ. ಆ ಜ್ಞಪ್ತಿಯೇ ಶಿರಸ್ಸಾಗಿಪ್ಪ ಪರಬ್ರಹ್ಮಕ್ಕೆ ಕರಣಾದಿಗಳೆಂಬ ಕರುಳಿಲ್ಲದ ಪರಕಾಯ ಒಡಲಾಯಿತ್ತಾಗಿ ಕರುಳಿಲ್ಲದ ಒಡಲೆಂಬ ಶಬ್ದಕ್ಕರ್ಥ. ಇಂತು ಪರಶಿವನೆಂಬ ಪುರುಷಂಗೆ ಅಕಾಯ ರೂಪಿಣಿಯಪ್ಪ ಪರಶಕ್ತಿಯೇ ಸ್ತ್ರೀಯಳಾಗಿಪ್ಪಳೆಂಬುದೀಗ ಅಂಗವಿಲ್ಲದಂಗನೆ ಸತಿಯಾಗಿಪ್ಪಳೆಂಬ ಶಬ್ದಕ್ಕರ್ಥ. ಆ ಪರಶಿವನ ಆ ಪರಶಕ್ತಿಯ ಅಭಿನ್ನಸಂಯೋಗ ಮಥನದಿಂದ ಚಿತ್ಶಕ್ತಿ ಹುಟ್ಟಿದಳೆಂಬುದೀಗ ಇವರಿಬ್ಬರ ಬಸಿರಲ್ಲಿ ಹುಟ್ಟಿದಳೆಮ್ಮ ತಾಯಿ ಎಂಬ ಶಬ್ದಕ್ಕರ್ಥ. ಆ ಚಿತ್ಶಕ್ತಿಯ ಗರ್ಭದೊಳಗೆ ಶಿವಶರಣ ಹುಟ್ಟಿದ ಕಾರಣ, ನಾ ಹುಟ್ಟಿ ಎಂಬ ಶಬ್ದಕ್ಕರ್ಥ. ಆ ಚಿತ್ಶಕ್ತಿಯನು ಶರಣನು ಕೃತನಿಶ್ಚಯ ಹಸ್ತದಿಂ ದೃಢವಿಡಿದ ಕಾರಣ ತಾಯ ಕೈಯ್ಯವಿಡಿದು ಎಂಬ ಶಬ್ದಕ್ಕರ್ಥ. ಆ ಶರಣನು ಆ ಶಕ್ತಿಯಲ್ಲಿ ಸಮರಸ ಸಂಗವ ಮಾಡಿ ಸರ್ವ ದೋಷಂಗಳಳಿದನೆಂಬುದೀಗ ತಾಯ ಕಯ್ಯವಿಡಿದು ಸಂಗವ ಮಾಡಿ ನಿರ್ದೋಷಿಯಾದೆನೆಂಬ ಶಬ್ದಕ್ಕರ್ಥ.

೧೦. ಎನ್ನ ನಾನರಿಯದಂದು ಮುನ್ನ ನೀನೇನಾಗಿರ್ದೆ ಹೇಳಾ? ಮುನ್ನ ಬಾಯ ಮುಚ್ಚಿಕೊಂಡಿರ್ದೆನೆಂಬುದು ನಾ ನಿನ್ನ ಕಣ್ಣಿಂದ ಕಂಡೆನು. ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದಡೆ ಅದು ನಿನ್ನ ಕಣ್ಣಿಂದ ಕಂಡು ನಾಚಿದೆ ನೋಡಾ. ಎನ್ನ ಕಾಂಬ ನಿನಗೆ ನಿನ್ನ ಕಾಂಬ ಎನಗೆ ಸುಚಿದ ನೋಟ ಒಂದೇ ನೋಡಾ ಗುಹೇಶ್ವರಾ. ನಿನ್ನ ಬೆಡಗಿನ ಬಿನ್ನಣವನರಿದೆ ನೋಡಾ ॥೧೦॥

ಟೀಕು:— ಶಿವಜ್ಞಾನೋದಯವಾದ ಶರಣನು ಅನಾದಿಯಲ್ಲಿ ಪರ ತತ್ವವು ನಿಶ್ಯಬ್ದವೆಂಬುದನು ಆ ಶಿವಜ್ಞಾನದೃಷ್ಟಿಯಲ್ಲಿ ನೋಡಿ ಕಂಡನು ಎಂಬುದೀಗ ಎನ್ನ ನಾನರಿಯದಂದು ಮುನ್ನ ನೀನೇನಾಗಿರ್ದೆ, ಮುನ್ನ ಬಾಯ ಮುಚ್ಚಿಕೊಂಡಿರ್ದನೆಂಬುದನು ನಾ ನಿನ್ನ ಕಣ್ಣಿಂದ ಕಂಡೆ ನೆಂಬ ಶಬ್ದಕ್ಕರ್ಥ. ಆ ಪರಶಿವ ತತ್ವದ ನಿಲವು ತಾನೆಂದರಿದ ಬಳಿಕ ನುಡಿದ ನುಡಿಯನು ತನ್ನ ಜ್ಞಾನ ದೃಷ್ಟಿಯಿಂದ ಕಂಡು ನಿವೃತ್ತಿಯ ಮಾಡಿದನೆಂಬುದೀಗ ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದಡೆ ಎನ್ನ ಕಣ್ಣಿಂದ ಕಂಡು ನಾಚಿದೆನೆಂಬ ಶಬ್ದಕ್ಕರ್ಥ. ಇಂತು ಶಿವತತ್ವ ಕಾಂಬ ಶರಣಂಗು ಆ ಶರಣನ ಕಾಂಬ ಶಿವತತ್ವಕ್ಕು ಮೂಲಜ್ಞಾನದೃಷ್ಟಿ ಒಂದೇ ಎಂದರಿದು ಪ್ರಭುದೇವರು ತಮ್ಮ ತಾವರಿದು ವಿವೇಕಿಸುತ್ತಿರ್ದರೆಂಬುದೀಗ ಎನ್ನ ಕಾಂಬ ನಿನಗೆ ನಿನ್ನ ಕಾಂಬ ಎನಗೆ ಸಂಚದ ನೋಟ ಒಂದೆ ಎಂಬ ಬೆಡಗನರಿದೆನೆಂಬ ಶಬ್ದಕ್ಕರ್ಥ.

೧೧. ಮಾಯೆಯ ಬಲೆಯಲ್ಲಿ ಸಿಲುಕಿದ ಮರುಳ ನಾನೆಂದರಿದ ಪರಿಯ ನೋಡಾ. ಲಿಂಗವೆಂದರಿದ ಪರಿಯ ನೋಡಾ. ತನ್ನ ವಿನೋದಕ್ಕೆ ಬಂದು ನಿಶ್ಚಿಂತ ನಿರಾಳ ಗುಹೇಶ್ವರನೆಂದರಿದ ಪರಿಯ ನೋಡಾ.

ಟೀಕು:—ಮಾಯಾ ಪಾಶವ ಹರಿದು, ಭ್ರಾಂತಿಸೂತಕವಳಿದು, ಶಿವ ಜ್ಞಾನೋದಯವಾದ ಶರಣನು ಮಾಯಾ ಬಲೆಯಲ್ಲಿ ಸಿಲುಕಿದ ಮರುಳನಾ ನೆಂದರಿದ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಆ ಮಹಾಲಿಂಗದ ಘನವ ಸದ್ವಿವೇಕದಿಂ ವಿವೇಕಿಸಿ ಅರಿದು ಪರಮ ಹರುಷಿತನಾಗಿ ಲಿಂಗವೆಂದರಿದ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಎನ್ನ ಲೀಲೆಯಿಂದ ನಾನೆ ಸಂಸಾರವ ಹೊದ್ದಿಸಿಕೊಂಡೆನಲ್ಲದೆ, ನಿಜದಿಂದ ನೋಡಲು, ತಾನೇ ಪರಶಿವನೆಂಬುದೀಗ, ತನ್ನ ವಿನೋದಕ್ಕೆ ಬಂದು ನಿಶ್ಚಿಂತ ನಿರಾಳ ಗುಹೇಶ್ವರನನರಿದ ಪರಿಯ ನೋಡಾ ಎಂಬ ಶಬ್ದಕ್ಕರ್ಥ

ಇಂತೀ ಪಿಂಡಜ್ಞಾನಸ್ಥಲ ಸಮಾಪ್ತ.



ಇಂತು ತನ್ನ ಪಿಂಡಜ್ಞಾನದ ಲೀಲೆಯಿಂದ ಮಾಯಾ ಮಹದಾದಿ ಪ್ರಪಂಚು ತನಗನ್ಯವಾಗಿರಲು, ಆ ಮಾಯೆಯ ತಾನರಿದು ಬೇರ್ಪಡಿಸಿ ನಿವೃತ್ತಿಯ ಮುಖದಿಂದ ವಿಡಂಬಿಸುತ್ತಿರಲು ಮುಂದೆ ಮಾಯಾವಿಲಾಸ ವಿಡಂಬನಸ್ಥಲವಾದುದು.

## ಮಾಯಾ ವಿಲಾಸ ವಿಡಂಬನಸ್ಥಲ

ಕಾಯದ ಮೊದಲಿಂಗೆ ಬೀಜವಾವುದೆಂದರಿಯದೀ ಲೋಕ. ಇಂದ್ರಿಯಂಗಳು ಬೀಜವಲ್ಲ. ಆ ಕಳಾ ಭೇದವಲ್ಲ. ಸ್ವಪ್ನ ಬಂದೆರಗಿತ್ತಲ್ಲಾ. ಇದಾವಂಗೂ ಶುದ್ಧ ಸುಯಿಧಾನವಲ್ಲ ಕಾಣಾ ಗುಹೇಶ್ವರಾ.

ಟೀಕು:— ಶಿವಾಂಶಿಕರಾದಾತ್ಮರಿಗೆ ತನುಸಂಬಂಧದ ಜನನಕ್ಕೆ ಮೂಲವಾವುದೆಂದೊಡೆ ಇಂದ್ರಿಯಂಗಳಿಂದುದಯವಲ್ಲ. ಅದೇನು ಕಾರಣವೆಂದಡೆ, ಆ ಇಂದ್ರಿಯಂಗಳು ಜಡವಿಷಯಂಗಳಾದ ಕಾರಣವೆಂಬುದೀಗ, ಕಾಯದ ಮೊದಲಿಂಗೆ ಇಂದ್ರಿಯಂಗಳು ಬೀಜವಲ್ಲವೆಂಬ ಶಬ್ದಕ್ಕರ್ಥ. ಆತ್ಮನ ಕಲಾ ಭೇದದಿಂದಾದುದಲ್ಲ. ಅದೇನು ಕಾರಣವೆಂದೊಡೆ, ಆತ್ಮನು ನಿರ್ಮಲ ಮಪ್ಪ ಶಿವಕಲಾಂಶಿಕನಾದ ಕಾರಣವೆಂಬುದೀಗ ಆ ಕಳಾಭೇದವಲ್ಲವೆಂಬ ಶಬ್ದಕ್ಕರ್ಥ. ಈ ದೇಹ ಸಂಬಂಧದುತ್ಪತ್ಯವೇತರಿಂದಾಯಿತ್ತೆಂದಡೆ ಶಿವ ತನ್ನ ತದಂಶವಾದಾತ್ಮರಿಗೆ ತಾನೇ ಮರವೆ ಘಟಿಸಲು ಆ ಮರವೆಯಾತ್ಮಂಗೆ ಎಡೆಯೊಕ್ಕ ಕಾರಣ ತಾನು ಶಿವಾಂಶಿಕವೆಂಬುವನು ಮರೆದು ದೇಹೋಹಂ ಎಂಬಲ್ಲಿ ದೇಹಭಾವ ಉದಯವಾಯಿತ್ತೆಂಬುದೀಗ ಸ್ವಪ್ನ ಬಂದೆರಗಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತು ಶಿವಜ್ಞಾನದಿಂದ ಆತ್ಮಂಗೆ ಬಂದ ಮರವೆಯೆ ದೇಹದ ಜನನಕ್ಕೆ ಮೊದಲೆಂಬುದನಾರಿಗೆಯು ಅರಿಯಬಾರದು. ಆ ಮರವೆಯನಾರು ಸಂಸ್ಕಾರವ ಮಾಡಿ ಜನನಕ್ಕೆ ರಹಿತರಾಗಬಾರದೆಂಬುದೀಗ ಇದಾವಂಗೂ ಶುದ್ಧಸುಯಿಧಾನವಲ್ಲ ಕಾಣಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೩. ಅಂಡಜವೆಂಬ ತತ್ತಿಯೊಡೆದು ಪಿಂಡ ಪಲ್ಲಟವಾಗಿ ಗಂಡ ಗಂಡರನರಸಿ ತೊಳಲಿ ಬಳಲುತ್ತಿದ್ದಾರೆ. ಖಂಡ ಮಂಡಲದೊಳಗೆ ಕಂಡೆನೊಂದ ಚೋದ್ಯವ ಕಂದನ ಕೈಯ್ಯ ದರ್ಪಣವ ಪ್ರತಿಬಿಂಬ ನುಂಗಿತ್ತು. ದಿವಾ

ರಾತ್ರಿ ಉದಯದ ಬೆಳಗನು ಕತ್ತಲೆ ನುಂಗಿತ್ತು. ಗುಹೇಶ್ವರನಲ್ಲಿಯೇ ನಿರ್ವಯಲಾಯಿತ್ತು.

ಟೀಕು:— ಪರಶಿವತತ್ವದಲ್ಲಿ ಒಂದು ಚಿತ್ತೆಂಬ ಬಿಂದು ಉದಯಿಸಿ ಊರ್ಧ್ವರೇತಸ್ಸೆಂಬ ರಸಬದ್ಧದಿಂದ ಪಂಚವರ್ಣಾತ್ಮಕ ಸ್ವರೂಪಿಂ ಸಕಲ ತತ್ವವೆಂಬ ಶಿಸುವಂ ಗರ್ಭೀಕರಿಸಿಕೊಂಡಿಪ್ಪ ಕಾರಣದಿಂದೊಂದಂಡಾಕೃತಿ ಯಾಗಲು ಇದು ಅಂಡಜ ಶಬ್ದಕ್ಕರ್ಥ. ಆ ಚಿತ್ ಬ್ರಹ್ಮಾಂಡದೊಡಲೊಳಗೆ ಪ್ರಪಂಚ ಬ್ರಹ್ಮಾಂಡವೆಂಬ ತತ್ತಿ ಹುಟ್ಟಿತೆಂಬುದೀಗ ತತ್ತಿ ಶಬ್ದಕ್ಕೆ ನಿರ್ವಚನ. ಆ ಬ್ರಹ್ಮಾಂಡದೊಳಗೆ ಸಮಸ್ತ ಜೀವರಾಶಿಗಳು ಹುಟ್ಟಿನಂದು ಹುಟ್ಟಿದನೊಬ್ಬ ಜೀವನು. ತನ್ನ ಸ್ವಭಾವ ಪಿಂಡವ ಮರೆದು, ಮಿಥ್ಯಪಿಂಡವ ಧರಿಸಲು ಅದು ಪಿಂಡ ಪಲ್ಲಟವಾಗಿ ಎಂಬ ಶಬ್ದಕ್ಕರ್ಥ. ಆ ಮಿಥ್ಯ ಪಿಂಡದೊಳಗೆ ಜ್ಞಾನೋದಯವಾದ ಸುಜ್ಞಾನಿಗಳು ತಮ್ಮನಿಲವಾವುದೆಂದರಿಯದೆ, ಇದಿರಿಟ್ಟುಕೊಂಡು ಪರಬಹ್ಮವನರಸುತಿಪ್ಪುದೀಗ, ಗಂಡ ಗಂಡರನರಸಿ ತೊಳಲಿ ಬಳಲುತ್ತಿದ್ದಾರೆ ಎಂಬ ಶಬ್ದಕ್ಕರ್ಥ. ಆ ಅರಸುವ ಖಂಡಿತಜ್ಞಾನದ ಬಗೆಯ ಭೇದಿಸಿ ಅರಿದು ಚೋದ್ಯಂಬಡುತಿಹುದೀಗ, ಖಂಡಮಂಡಲದೊಳಗೆ ಕಂಡೆನೆಂದು ಚೋದ್ಯವನೆಂಬ ಶಬ್ದಕ್ಕರ್ಥ. ಇಂತು ತನ್ನ ತಾನರಸುತ್ತಿರ್ಪ ಕರ್ಮಾವಶೇಷವೆಂಬ ಸುವಿವೇಕ ಶಿಷ್ಯನ ಜ್ಞಾನದೃಷ್ಟಿಯ ಮುಂದೆ ಇದಿರಿಟ್ಟು ತೋರುವ ಪರಬ್ರಹ್ಮವು ದರ್ಪಣಸ್ಥಾನವಾದ ಕಾರಣ ಕಂದನ ಕೈದರ್ಪಣವೆಂಬ ಶಬ್ದಕ್ಕರ್ಥ. ಆ ಇದಿರಿಟ್ಟು ತೋರುವ ಪರಬ್ರಹ್ಮವು ತನ್ನಲ್ಲಿ ತೋರಿ ಪ್ರತಿಬಿಂಬಿಸಿತ್ತೆಂದರಿದು, ಆ ಪ್ರತಿಬಿಂಬ ಭಾವವೇ ಪರಬ್ರಹ್ಮವನವಗ್ರಹಿಸಿ ತಾನೆ ಉಳಿಯಲು ಆದೀಗಾ ಕಂದನ ಕಯ್ಯ ದರ್ಪಣವ ಪ್ರತಿಬಿಂಬ ನುಂಗಿತ್ತೆಂಬ ಶಬ್ದಕ್ಕರ್ಥ. ಅರಿವೆಂಬುದೇ ದಿವ ಶಬ್ದಕ್ಕರ್ಥ. ಮರವೆಂಬುದೇ ರಾತ್ರಿ ಎಂಬುದಕ್ಕರ್ಥ. ಈ ಅರಿವು ಮರವೆಗಳೆರಡನು ತನ್ನಲ್ಲಿ ಹುಟ್ಟಿಸುವರಿವಿನ ಬೆಳಗು ಮಿಥ್ಯಾಜ್ಞಾನ ಪ್ರವೇಶಿತವಹ ಕಾರಣ ದಿವಾ ರಾತ್ರಿ ಉದಯದ ಬೆಳಗನು ಕತ್ತಲೆ ನುಂಗಿತ್ತೆಂಬುದಕ್ಕರ್ಥ. ಆ ಮರವೆಯು ನಿಜದಿಂದರಿಯಲು, ಅದು ಪರಬ್ರಹ್ಮದಲ್ಲಿ ಅಳಿಯಿತ್ತೆಂಬುದೀಗ ನಿರ್ವಯಲಾಯಿತ್ತೆಂಬ ಶಬ್ದಕ್ಕರ್ಥ. ॥೧೩॥

೧೪. ರಕ್ಕಸಿಗಿಬ್ಬರು ಮಕ್ಕಳು, ತೊಟ್ಟಿಲಮೇಲೈವರು, ರಕ್ಕಸಿ ಬಾಣತಿಯಾದರೆ, ಮಕ್ಕಳಿಗಿನ್ನೆಂತೊ? ತೊಟ್ಟಿಲ ತೂಗುವೆ. ಜೋಗುಳವಾಡುವೆ. ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತು. ಇದೇನು ಹೇಳಾ ಗುಹೇಶ್ವರಾ?

ಟೀಕು:— ಮಾಯೆ ಎಂಬ ರಕ್ಕಸಿ ಚತುರ್ದಶ ಭುವನಂಗಳೆಲ್ಲವನು ಅವಗ್ರಹಿಸಿ ನುಂಗುತ್ತಿಹ ಕಾರಣ ಆ ಮಾಯೆಗೆ ರಕ್ಕಸಿ ಎಂಬ ನಾಮವಾಯಿತ್ತು. ಆ ಮಾಯಾ ಸಂಕಲ್ಪಭಾವದಿಂ ಜೀವ ಪ್ರಾಣಗಳೆಂಬೆರಡು ಹುಟ್ಟಿದ ಕಾರಣ ಆ ರಕ್ಕಸಿಗಿಬ್ಬರು ಮಕ್ಕಳೆಂಬ ಶಬ್ದಕ್ಕರ್ಥ. ಆ ಜೀವ ಪ್ರಾಣಂಗಳಿಗೆ ತನುವೆ ಆಶ್ರಯಸ್ಥಾನವಾದ ಕಾರಣ ತೊಟ್ಟಿಲೆಂಬ ಶಬ್ದಕ್ಕರ್ಥ. ಆ ತನುವಿನೊಳಗೆ ಪಂಚಭೂತಂಗಳು ಮಾಯಾಧೀನದಿಂ ಹುಟ್ಟಿದವೆಂಬುದೀಗ ತೊಟ್ಟಿಲಮೇಲೈವರು ಎಂಬ ಶಬ್ದಕ್ಕರ್ಥ. ಇಂತು ತನ್ನಿಂದ ಹುಟ್ಟಿದ ಜೀವ ಪ್ರಾಣ ಪಂಚಭೂತಂಗಳನು ತಾನೆ ನುಂಗುತ್ತುಗುಳುತ್ತ ತಾಯಿ ರಕ್ಕಸಿಯಾದಳೆಂಬಂತಿರಲು, ಅದು ರಕ್ಕಸಿ ಬಾಣತಿಯಾದಳೆಂಬ ಶಬ್ದಕ್ಕರ್ಥ. ಇಂತು ತಾಯಿ ರಕ್ಕಸಿಯಾಗಲು ಮಕ್ಕಳಿನ್ನೆಂತು ಬದುಕುವರೆಂಬುದು ಮಕ್ಕಳಿಗಿನ್ನೆಂತೊ ಎಂಬ ಶಬ್ದಕ್ಕರ್ಥ. ಇಂತು ಮಾಯಾಧೀನದಿಂ ದೇಹಕರ್ಮವಶಮಪ್ಪನ್ನಕ್ಕರ ಚರಿಸುವೆನೆಂಬುದೀಗ, ತೊಟ್ಟಿಲ ತೂಗುವೆನೆಂಬುದಕ್ಕರ್ಥ. ಆ ದೇಹ ಚರಿಸುವನ್ನಕ್ಕರ ಶಬ್ದಜಾಲಂಗಳಿಂ ಆ ದೇಹ ಪ್ರಾರಬ್ಧವ ಜೋಗೈಸುವೆನೆಂಬುದೀಗ ಜೋಗುಳವಾಡುವೆನೆಂಬ ಶಬ್ದಕ್ಕರ್ಥ. ಆ ಮಾಯೆ ತನ್ನನು ಆ ದೇಹವೇ ಅವಗ್ರಹಿಸಿಕೊಂಡಿಪ್ಪುದೀಗ, ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತೆಂಬ ಶಬ್ದಕ್ಕರ್ಥ.

೧೫. ಗಗನದ ಮೇಲೊಂದಭಿನ್ನದ ಗಿಳಿ ಹುಟ್ಟಿ ಸಯಸಂಭ್ರಮದಲ್ಲಿ ಮನೆಯ ಮಾಡಿತ್ತು. ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತು. ಬ್ರಹ್ಮನಾ ಗಿಳಿಗೆ ಹಂಜರವಾದ. ವಿಷ್ಣುವಾ ಗಿಳಿಗೆ ಕೊರೆಕೂಳಾದ. ರುದ್ರನಾ ಗಿಳಿಗೆ ಕೋಳುವೋದ. ಇಂತೀ ಮೂವ್ವರ ಮುಂದಣ ಕಂದನ ನುಂಗಿ ದೃಷ್ಟನಾಮ ನಷ್ಟವಾಯಿತ್ತು. ಇದೇನು ಹೇಳಾ ಗುಹೇಶ್ವರಾ!

ಟೀಕು:—"ಆತ್ಮಾಕಾಶಮಯಂ ತಾವತ್" ಆತ್ಮನೆಂಬುದೀಗ ಗಗನವೆಂಬ ಶಬ್ದಕ್ಕರ್ಥ. ಆ ಆತ್ಮನ ಅಹಂಕಾರ ವಿಭ್ರಾಂತಿಯ ತೂರ್ಯಾವಸ್ಥೆಯಲ್ಲಿ ಜೀವಹಂಸನುದಯಿಸಿದನೆಂಬುದೀಗ, ಗಗನದ ಮೇಲೊಂದ

ಭಿನ್ನದ ಗಿಳಿ ಹುಟ್ಟಿತೆಂಬುವದಕ್ಕರ್ಥ. ಆ ಜೀವ ಹಂಸನು ಸಂಸಾರ ಪ್ರಪಂಚುವೆ ತನಗೆ ಆಶ್ರಯಿಸಿದ ಕಾರಣದಿಂ ಸಯ ಸಂಭ್ರಮದಲ್ಲಿ ಮನೆಯ ಮಾಡಿತ್ತೆಂಬ ಶಬ್ದಕ್ಕರ್ಥ. ಆ ಒಬ್ಬ ಜೀವಹಂಸನು ಪಂಚವಿಂಶತಿ ಭೂತಾತ್ಮನಪ್ಪ ಕಾರಣದಿಂ ಆ ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತೆಂಬ ಶಬ್ದಕ್ಕರ್ಥ. ರಜೋಗುಣ ಸಂಬಂಧವೆ ಬ್ರಹ್ಮತತ್ವವಾದ ಕಾರಣ ಆ ರಜೋಗುಣ ಸಂಬಂಧಮಪ್ಪ ಸ್ಥೂಲತನುವೆ ಆ ಜೀವಂಗೆ ನಿವಾಸಸ್ಥಾನವಾಯಿತ್ತೆಂಬುದೀಗ ಬ್ರಹ್ಮನಾ ಗಿಳಿಗೆ ಹಂಜರವಾದನೆಂಬ ಶಬ್ದಕ್ಕರ್ಥ. ಸಾತ್ವಿಕಗುಣ ಸಂಬಂಧವೆ ವಿಷ್ಣುತತ್ವವಾಗಿ, ಆ ಸಾತ್ವಿಕಗುಣ ಸಂಬಂಧಮಪ್ಪ ಸೂಕ್ಷ್ಮತನು ವಿಂಬಾವ ಇಂದ್ರಿಯ ವಿಷಯಾದಿ ಭೋಗಂಗಳ ಸ್ಥಿತಿಗತಿ ಆ ಜೀವಂಗೆ ಆಹಾರವಾದ ಕಾರಣ ವಿಷ್ಣುವಾ ಗಿಳಿಗೆ ಕೊರೆ ಕೂಳಾದನೆಂಬ ಶಬ್ದಕ್ಕರ್ಥ. ತಮೋಗುಣ ಸಂಬಂಧವೆ ರುದ್ರತತ್ವವಾಗಿ ಆ ತಮೋಗುಣ ಸಂಬಂಧವಪ್ಪ ಕಾರಣ ತನುವಿನ ಮರವೆ ಆ ಜೀವಭಾವ ಭ್ರಾಂತಿಗೆ ಕೋಳುವೋಯಿತ್ತೆಂಬುದೀಗ ರುದ್ರನಾ ಗಿಳಿಗೆ ತಾ ಕೋಳುವೋದನೆಂಬ ಶಬ್ದಕ್ಕರ್ಥ. ಇಂತೀ ತ್ರಿತತ್ವತ್ರಯಂಗಳಿಗೆ ಇದಿರಿಟ್ಟಿಹ ಆ ಜೀವಭ್ರಾಂತು ನುಂಗಿಪ್ಪ ಕಾರಣ ಲಕ್ಷ್ಯಕ್ಕೆಯೂ ತನ್ನ ನಾಮಕ್ಕೆಯೂ ನಷ್ಟ ಉಂಟೆಂಬುದೀಗ ಮೂವ್ವರ ನುಂಡಣ ಕಂದನ ನುಂಗಿ ದೃಷ್ಟನಾಮ ನಷ್ಟವಾಯಿತ್ತೆಂಬ ಶಬ್ದಕ್ಕರ್ಥ.

(೧೬) ನೆಲದ ದೊಂಬೆಗೆ ಜಲದ ಬಣ್ಣವನುಡಿಸಿ ಹಲವು ಪರಿಯಾಶ್ರಮದಲ್ಲಿ ಉಲಿವ ಗೆಜ್ಜೆಯ ಕಟ್ಟಿ ವಾಯುವನಲನ ಸಂಚಕ್ಕೆ ಅರಳೆಲೆಯ
೫೦ ಶೃಂಗಾರವ ಮಾಡಿ ಆಡಿಸುವ ಯಂತ್ರವಾಹಕನಾರೋ? ಬಯಲ ಕಂಭಕ್ಕೆ ತಂದು ಸಯವೆಂದು ಪರವ ನೆಟ್ಟಡೆ ಸಯವದ್ವಯವಾಯಿತ್ತು. ಏನೆಂಬೆ ಗುಹೇಶ್ವರಾ?

ಟೀಕು:— ಪೃಥ್ವಿಯಂಶದ ತನುವೆಂಬುದೀಗ ನೆಲದ ಬೊಂಬೆ ಎಂಬ ಶಬ್ದಕ್ಕರ್ಥ. ಆ ತನುವಿಂಗೆ ಅಪ್ಪುವಿನ ಅಂಶರಸದಿಂ ಬದ್ಧವ ಮಾಡಿ ಎಂಬುದೀಗ ಜಲದ ಬಣ್ಣವನುಡಿಸಿ ಎಂಬ ಶಬ್ದಕ್ಕರ್ಥ. ಆ ಪೃಥ್ವಿ ಅಪ್ಪುವಿನಂಶದಿಂ ಹಲವು ಪ್ರಕಾರದ ಪ್ರಕೃತಿ, ಆ ಪ್ರಕೃತಿ ಗುಣದಿಂ ಉಲಿವ ಕರಣಂಗಳೆಂಬುದೀಗ ಹಲವು ಪರಿಯಾಶ್ರಮದಲ್ಲಿ ಉಲಿವ ಗೆಜ್ಜೆಯ ಕಟ್ಟಿ ಎಂಬ ಶಬ್ದಕ್ಕರ್ಥ. ಅಗ್ನಿವಾಯುಗಳೆರಡು ಆ ತನುವಿಂಗೆ ಆಧಾರ ಸಂಚವಾಯಿತ್ತೆಂಬುದೀಗ, ವಾಯುವನಲನ ಸಂಚವೆಂಬ ಶಬ್ದಕ್ಕರ್ಥ. ಇಂತಪ್ಪ ಪ್ರಾಣಸಹಿತ



ಶರೀರ ಸಂಬಂಧಮಪ್ಪ ಜೀವನ ಹಣೆಯಲ್ಲಿ ಪ್ರಾರಬ್ಧ ಸಂಕಲ್ಪಿತವಾಯಿತ್ತೆಂಬುದೀಗ ಅರಳೆಲೆಯ ಶೃಂಗಾರವ ಮಾಡಿ ಎಂಬ ಶಬ್ದಕ್ಕರ್ಥ. ಇಂತು ಆ ಜೀವಂಗೆ ಸಂಸಾರವನೊಪ್ಪವಿಟ್ಟು ಪರಶಿವನು ಯಂತ್ರವಾಹಕನಾಗಿ ಆಡಿಸುತ್ತಿದ್ದನೆಂಬುದೀಗ ಆಡಿಸುವ ಯಂತ್ರವಾಹಕನಾರೋ ಎಂಬ ಶಬ್ದಕ್ಕರ್ಥ. ಇವು ಮಿಥ್ಯವೆಂದರಿವುದೆ ಬಯಲೆಂಬ ಶಬ್ದಕ್ಕರ್ಥ. ದೃಢಬುದ್ಧಿ ಸ್ತಂಭವೆಂಬುದೀಗ ಕಂಭವೆಂಬರ್ಥ. ಆ ಕಂಭದಲ್ಲಿ ಪರಬ್ರಹ್ಮವೆ ನಿತ್ಯವೆಂದರಿದು ನೆಲೆಗೊಳಿಸಿದವೆಂಬುದೀಗ ಸಯವೆಂದು ಪರವ ನೆಲೆಗೊಳಿಸಿದರೆ ಎಂಬ ಶಬ್ದಕ್ಕರ್ಥ. ಆ ನೆಲೆಗೊಂಡ ನಿತ್ಯದಿಂದ ದ್ವೈತಭಾವ ವಳಿಯಿತ್ತಾಗಿ ಆ ಸಯವದ್ವಯವಾಯಿತ್ತೆಂಬ ಶಬ್ದಕ್ಕರ್ಥ.

೧೭. ಇಪ್ಪತ್ತೈದು ತಲೆಯೊಳಗೆ ಏಳು ಮೊಲೆ, ಮುಖವೆಂಟು, ಹದಿನಾಲ್ಕು ಬಾಯಿ, ನೂರಿಪ್ಪತ್ತು ಕೋರೆದಾಡೆ, ಹೃದಯದಲ್ಲಿ ಹುದುಗಿರ್ದ ಕತ್ತಲೆಯ ತೆಗೆದು ಮುದ್ದಾಡಿ, ಧ್ವನಿಯ ಧರ್ಮವ ನುಂಗಿ, ಮನದ ಬಣ್ಣಗಳಡಗಿ, ಹೆತ್ತ ತಾಯಿ ಮಗನ ನುಂಗಿ, ಶಿಸು ತಾಯ ಬೆಸಲಾಗಿ ಗುಹೇಶ್ವರನೆಂಬ ನಿಲವು ಅಂಗೈಯ ಮೊಲೆ ನುಂಗಿತ್ತು.

ಟೀಕು:— ದೇಹಕ್ಕೆ ಶಿರಸ್ಸು ಹೇಗೆ ಪ್ರಧಾನವಾಗಿಪ್ಪುದು, ಹಾಗೆ ತದ್ದೇಹಕ್ಕೆ ಪಂಚವಿಂಶತಿ ತತ್ವವೆ ಪ್ರಧಾನವಾಗಿಹ ಕಾರಣ, ಇಪ್ಪತ್ತೈದು ತಲೆ ಎಂಬ ಶಬ್ದಕ್ಕರ್ಥ. ಸಪ್ತವ್ಯಸನಂಗಳು ವಿಷಯಂಗಳೆಂಬ ರಸ ತುಂಬಿಕೊಂಡಿರ್ದು ಆ ದೇಹಕ್ಕೆ ಸಂಸಾರ ಸುಖವ ಕೊಟ್ಟು ಪೋಷಿಸಿಕೊಂಡಿಪ್ಪ ಕಾರಣ ಏಳು ಮೊಲೆ ಎಂಬ ಶಬ್ದಕ್ಕರ್ಥ. ಆ ವ್ಯಸನ ವಿಷಯಂಗಳ ಗ್ರಹಿಸುವದಕ್ಕೆ ಮುಖವಾವುದೆಂದಡೆ, ಅಷ್ಟಮದಂಗಳೆ ಮುಖವಾದ ಕಾರಣ ಮುಖವೆಂಟು ಎಂಬ ಶಬ್ದಕ್ಕರ್ಥ. ಆ ಮುಖಂಗಳಿಗೆ ಚತುರ್ದಶ ಇಂದ್ರಿಯಂಗಳೆಂಬವು ಬಾಯಾದ ಕಾರಣ, ಹದಿನಾಲ್ಕು ಬಾಯಿ ಎಂಬ ಶಬ್ದಕ್ಕರ್ಥ. ಆ ಚತುರ್ದಶ ಮುಖದ್ವಾರದೊಳಗೆ ಆ ವಿಷಯಮಂ ಮಥನಿಸಿ ಭೋಗಿಸುವ ಅಂತರಂಗವಾವಾವೆಂದಡೆ, ನೂರಿಪ್ಪತ್ತು ಕರಣ ಮಥನಂಗಳೆಂಬವೆ ಕಾರಣವಾದ ಕಾರಣ ನೂರಿಪ್ಪತ್ತು ಕೋರೆದಾಡೆ ಎಂಬ ಶಬ್ದಕ್ಕರ್ಥ. ಇಂತಪ್ಪ ಮಾಯಾ ಭ್ರಾಂತಿಯ ಜೀವನ ಹೃದಯದಲ್ಲಿ ಅಡಗಿಪ್ಪ ಜ್ಞಾನಾಗ್ನಿಯ ಸ್ವಾನುಭಾವ ಬೋಧೆಯಿಂದೆಬ್ಬಿಸಿ ತದ್ದೇಹದಿಂ ಬೇರ್ಪಡಿಸಿ, ಕೃತ ನಿಶ್ಚಯದಿಂ ಪಿಡಿದು, ಲಾಲಿಸುತ್ತಿರಲು ಎಂಬುದೀಗ ಹೃದ